**ದಿನಾಂಕಃ 23.01.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

ಪಾಟೀ ಸವಾಲುಃ ಪ್ರತಿ**ವಾದಿ ಪರ** ಶ್ರೀ ಎಸ್.ಎ.ಎಸ್ **ವಕೀಲರಿಂದಃ**

ಗುರುಬಸಪ್ಪ ಯಾನೆ ಮರಿಗಂಡಪ್ಪ ನನ್ನ ತಂದೆ. ನನ್ನ ತಂದೆಗೆ ನಾನು, ರಾಜಮ್ಮ ಮತ್ತು ಪ್ರೇಮ ಮೂರು ಜನ ಮಕ್ಕಳು. ಈ ದಾವೆಯಲ್ಲಿ ನನ್ನ ಸಹೋದರಿಯರಾದ ರಾಜಮ್ಮ ಮತ್ತು ಪ್ರೇಮರವರನ್ನು ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ. ನಮ್ಮ ಆಸ್ತಿಯಲ್ಲಿ ನೀರಿನ ಟ್ಯಾಂಕ್ ಮತ್ತು ನಲ್ಲಿಯನ್ನು ಅಳವಡಿಸಿರುವುದನ್ನು ತೆರವುಗೊಳಿಸಿ ಎಂದು ಈ ದಾವೆಯನ್ನು ಸಲ್ಲಿಸಿರುತ್ತೇನೆ. ಸದರಿ ನೀರಿನ ಟ್ಯಾಂಕ್ ಮತ್ತು ನಲ್ಲಿಯನ್ನು ಪಂಚಾಯಿತಿಯವರು ಅಳವಡಿಸಿರುತ್ತಾರೆ. ದಾವಾ ಎ ಅನುಸೂಚಿ ಸ್ವತ್ತಿನ ದಕ್ಷಿಣಕ್ಕೆ ನೀರಿನ ಟ್ಯಾಂಕ್ ಮತ್ತು ನಲ್ಲಿಯನ್ನು ಅಳವಡಿಸಿರುತ್ತಾರೆ.

ಸರ್ವೆ ನಂ. 14/2 ರಲ್ಲಿ ನನ್ನ ತಂದೆಯು 12 ಗುಂಟೆ ಜಮೀನನ್ನು ಸ್ವಯಾರ್ಜಿತವಾಗಿ ಖರೀದಿಸಿದ್ದಾರೆ ಎಂದರೆ ಸರಿ. ಸದರಿ 12 ಗುಂಟೆ ಜಮೀನಿನಲ್ಲಿ ನನ್ನ ತಂದೆಯು ಪೂರ್ವ -ಪಶ್ಚಿಮ 20 ಅಡಿ, ಉತ್ತರ -ದಕ್ಷಿಣ 30 ಅಡಿ ಜಾಗವನ್ನು 3 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿ. ನಂತರ 3 ನೇ ಪ್ರತಿವಾದಿಯು ಸದರಿ ಜಾಗದಲ್ಲಿ ಫ್ಲೋರ್ ಮಿಲ್ ಅನ್ನು ಕಟ್ಟಿದ್ದಾರೆ ಎಂದರೆ ಸರಿ. ಸದರಿ ಸರ್ವೆ ನಂ. 14/2 ರಲ್ಲಿ ನಮಗೆ ಸೇರಿದ 50 X 50 ಅಳತೆಯ ಮನೆ ಇರುತ್ತದೆ. ಸದರಿ ಸರ್ವೆ ನಂ. 14/2 ರಲ್ಲಿ ನಮ್ಮ ಮನೆ ಮತ್ತು 3 ನೇ ಪ್ರತಿವಾದಿಯ ಫ್ಲೋರ್ ಮಿಲ್ ಹೊರತುಪಡಿಸಿ ಬೇರೆ ಯಾವುದೇ ಕಟ್ಟಡಗಳು ಇರುವುದಿಲ್ಲ. ಸಾಕ್ಷಿದಾರರು ಮುಂದುವರೆದು 3 ನೇ ಪ್ರತಿವಾದಿಯು ನಮ್ಮ ಜಮೀನಿನಲ್ಲಿ ಪೂರ್ವ -ಪಶ್ಚಿಮ 18 ಅಡಿ, ಉತ್ತರ -ದಕ್ಷಿಣ 30 ಅಡಿ ಜಾಗವನ್ನು ಒತ್ತುವರಿ ಮಾಡಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. ಸದರಿ ರೀತಿ 3 ನೇ ಪ್ರತಿವಾದಿಯು ನಮ್ಮ ಜಾಗವನ್ನು ಒತ್ತುವರಿ ಮಾಡಿಕೊಂಡ ಬಗ್ಗೆ ಆರ್ ಟಿ ಸಿ ಮತ್ತು ಸ್ಕೆಚ್ ದಾಖಲಾತಿಯನ್ನು ಹಾಜರುಪಡಿಸಿರುತ್ತೇನೆ. ನಾನು ಹೇಳಿದಂತೆ ಯಾವುದೇ ಸ್ಕೆಚ್ ದಾಖಲಾತಿಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

ನನ್ನ ಮತ್ತು ನನ್ನ ತಂದೆಯ ಮಧ್ಯೆ ಬಾಯಿ ಮಾತಿನ ಮೂಲಕ ವಿಭಾಗವಾಗಿರುತ್ತದೆ. ಸದರಿ ವಿಭಾಗವು ಲಿಖಿತ ದಾಖಲಾತಿಯ ಮೂಲಕ ಆಗಿರುವುದಿಲ್ಲ. ನಿಪಿ-2 ರ ಸ್ಕೆಚ್ ಅನ್ನು ಯಾರು ತಯಾರಿಸಿದ್ದಾರೆ ಎಂದು ನನಗೆ ಗೊತ್ತಿಲ್ಲ. ಸದರಿ ನಿಪಿ-2 ರ ಸ್ಕೆಚ್ ನ ಬಗ್ಗೆ ನನಗೆ ಮಾಹಿತಿ ಇಲ್ಲ. ನಿಪಿ-2 ರ ಸ್ಕೆಚ್ ಅನ್ನು ಈ ದಾವೆಗಾಗಿ ಸೃಷ್ಟಿ ಮಾಡಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. 3 ನೇ ಪ್ರತಿವಾದಿಯು ಕ್ರಯಕ್ಕೆ ಪಡೆದ 5-6 ವರ್ಷಗಳ ನಂತರ ಪೂರ್ವ -ಪಶ್ಚಿಮ 18 ಅಡಿ, ಉತ್ತರ -ದಕ್ಷಿಣ 30 ಅಡಿ ಜಾಗವನ್ನು ಒತ್ತುವರಿ ಮಾಡಿಕೊಂಡಿರುತ್ತಾರೆ.

ಮುಂದುವರಿದ ಪಾಟೀಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಕಾಲಾವಕಾಶ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

ಹೆಚ್ಚುವರಿ ಸಿವಿಲ್ ಮತ್ತು ಜೆ ಎಮ್ ಎಫ್ ಸಿ
ನ್ಯಾಯಾಧೀಶರು, ತಿ.ನರಸಿಪುರ